

ಶರದೃತುವಿನಲ್ಲಿ ಕೆಂಬಣ್ಣದ ಸಾಲುಮರಗಳಿಂದ ಇಮ್ಮಡಿಯಾದ ನಗರದ ಚೆಲುವು

ವಸ್ತುಸಂಗ್ರಹಾಲಯವಾಗಿ ಮಾರ್ಪಡಿಸಿದ್ದಾರೆ. ಅಲ್ಲಿನ ಗೈಡ್‌ಗಳ ಬಾಯಲ್ಲಿ ಗ್ರಾಂಟ್‌ನ ಚರಿತ್ರೆಯ ಬಗ್ಗೆ ನಿರರ್ಗಳವಾದ ವಿವರಣೆಯನ್ನು ಕೇಳಿದಾಗ ಸಮೃದ್ಧವಾದ ಇತಿಹಾಸವುಳ್ಳ ಈ ರೀತಿ ಇರಬಾರದೇ ಎಂದೆನಿಸುತ್ತದೆ. ಗ್ರಾಂಟ್‌ನ ಮನೆಯ ಸುತ್ತಲಿನ ತಂಪಾದ ಪ್ರಶಾಂತ ವಾತಾವರಣವನ್ನು, ಉದುರುತ್ತಿರುವ ಕಿತ್ತಳೆ ಹಳದಿ ಬಣ್ಣದ ಎಲೆಗಳ ಮರಗಳನ್ನು ಬಿಟ್ಟುಬರಲು ಮನಸ್ಸು ಹಿಂಜರಿಯುತ್ತದೆ.

## ಮಹಾನದಿಗಳ ಸಂಗಮ

ಅಮೆರಿಕದ ನದಿಗಳ ಪೈಕಿ ಮಿಸ್ಸೋರಿ ನದಿ ಅತ್ಯಂತ ಉದ್ದವಾದುದು. ಆ ನದಿ ಮಿಸ್ಸಿಸ್ಸಿಪ್ಪಿ ನದಿಯನ್ನು ಸೇಂಟ್ ಲೂಯಿಸ್ ಸಮೀಪದಲ್ಲಿರುವ 'ವೆಸ್ಟ್ ಆಲ್ಟನ್' ಎಂಬಲ್ಲಿ ಕೂಡಿಕೊಳ್ಳುತ್ತದೆ. ನಮ್ಮ ತುಂಗಾ ಮತ್ತು ಭದ್ರಾ ನದಿಗಳು ಕೂಡ್ಲಿಯಲ್ಲಿ ಒಂದನ್ನೊಂದು ಸೇರುವಂತೆ.

ಈ ಮಿಸ್ಸೋರಿ–ಮಿಸ್ಸಿಸ್ಸಿಪ್ಪಿ ಎಂಬ ಬೃಹತ್ ನದಿಗಳ ಸಂಗಮವನ್ನು ಕಾಣಬೇಕೆನ್ನುವುದು ನನ್ನ ಬಹುದಿನದ ಬಯಕೆಯಾಗಿತ್ತು. ಮುಸ್ಸಂಜೆಯ ಹೊತ್ತಿನಲ್ಲಿ ಆ ಪ್ರದೇಶವನ್ನು ತಲುಪಿದಾಗ ನಿಧಾನವಾಗಿ ರಾಜಗಾಂಭೀರ್ಯದಿಂದ ಹರಿಯುತ್ತಿದ್ದ ಮಿಸ್ಸಿಸ್ಸಿಪ್ಪಿ ಹಾಗೂ ಸ್ವಲ್ಪ ರಭಸದಿಂದ ಹರಿಯುತ್ತಾ ಅದನ್ನು ಒಂದು ಕೋನದಲ್ಲಿ ಕೂಡಿಕೊಳ್ಳುವ ಮಿಸ್ಸೋರಿ, ಆ ಮಿಲನದಿಂದಾಗಿ ನಂತರ ಸಂಗಮದ ನೀರು ಮುಂದೆ ಹರಿಯುವ ಗತಿಯಲ್ಲಿ ಉಂಟಾಗುವ ಬದಲಾವಣೆ, ಇವುಗಳನ್ನು ಆ ಪ್ರಶಾಂತ ವಾತಾವರಣದಲ್ಲಿ ನೋಡುತ್ತಿದ್ದ ನನಗೆ ಸಮಯ ಸರಿದದ್ದೇ ತಿಳಿಯಲಿಲ್ಲ.

## ಎಲ್ಲೆಲ್ಲೂ ಉದ್ಯಾನವೇ...

110 ಪಾರ್ಕ್‌ಗಳಿರುವ, ಉದ್ಯಾನ ನಗರಿಯಾದ ಸೇಂಟ್ ಲೂಯಿಸ್‌ನ ಹೃದಯ ಭಾಗದಲ್ಲಿ 'ಫಾರೆಸ್ಟ್ ಪಾರ್ಕ್' ಎಂಬ 1300 ಎಕರೆ ವ್ಯಾಪ್ತಿಯ ಒಂದು ದೊಡ್ಡ ಉದ್ಯಾನವನವಿದೆ. ನಮ್ಮ ಲಾಲ್ ಬಾಗ್ ಮತ್ತು ಮತ್ತು ಕಬ್ಬನ್ ಪಾರ್ಕ್‌ಗಳ ಒಟ್ಟು ವಿಸ್ತೀರ್ಣಕ್ಕಿಂತ ದೊಡ್ಡದಾದ ಈ ಉದ್ಯಾನದಲ್ಲಿ ಒಂದು ಪ್ರಮುಖವಾದ ವಸ್ತುಪ್ರದರ್ಶನ ಹಾಗೂ ಒಲಿಂಪಿಕ್ಸ್ ಕ್ರೀಡೆಗಳು 1904ರಲ್ಲಿ ನಡೆದಿದ್ದವು. ಆರ್ಟ್ ಗ್ಯಾಲರಿ, ಮಿಸ್ಸೋರಿ ರಾಜ್ಯದ ಚರಿತ್ರೆಯ ಮ್ಯೂಸಿಯಂ, ಮೃಗಾಲಯ ಹಾಗೂ ವಿಜ್ಞಾನ ಕೇಂದ್ರಗಳು ಆ ಪಾರ್ಕ್‌ನ ವ್ಯಾಪ್ತಿಯಲ್ಲಿ ಬರುತ್ತವೆ.

ನಮ್ಮ ವಿಶ್ವೇಶ್ವರಯ್ಯ ಮ್ಯೂಸಿಯಂ ತರಹದ್ದೇ ಆದ 'ಸೇಂಟ್ ಲೂಯಿಸ್ ವಿಜ್ಞಾನ ಕೇಂದ್ರ'ದಲ್ಲಿ ಹೆಚ್ಚು ವೈಜ್ಞಾನಿಕ/ತಾಂತ್ರಿಕ ಸಾಧನಗಳನ್ನು ಪ್ರದರ್ಶನಕ್ಕಿಟ್ಟಿದ್ದಾರೆ. ನಮ್ಮಲ್ಲಿ ಕಂಡುಬರುವ ಜನಜಂಗುಳಿ ಹಾಗೂ ಗಲಾಟೆ ಅಲ್ಲಿ ಕಂಡುಬರಲಿಲ್ಲ. ಅದೇ ಕೇಂದ್ರದಲ್ಲಿರುವ ತಾರಾಲಯದ 'ಸ್ಕೈ ಶೋ ಪ್ರದರ್ಶನ' ಉತ್ಕೃಷ್ಟವಾದ ಮಾಹಿತಿಯನ್ನೇನೋ ಒದಗಿಸಿತು. ಆದರೆ, ಬೆಂಗಳೂರಿನ ನಮ್ಮ ಜವಾಹರಲಾಲ್ ನೆಹರು ತಾರಾಲಯದಲ್ಲಿನ ಅಂತಹ ಕಾರ್ಯಕ್ರಮದ ದೃಶ್ಯವೈಭವ ಸೇಂಟ್ ಲೂಯಿಸ್‌ನ ಪ್ರದರ್ಶನದಲ್ಲಿ ನನಗೆ ಕಂಡುಬರಲಿಲ್ಲ.

## ಅಪರಿಚಿತವಲ್ಲದ ಅಮೆರಿಕ!

ಅಮೆರಿಕದ ಗಗನಚುಂಬಿ ಕಟ್ಟಡಗಳು, ಮಾಲ್‌ಗಳು, ಸೂಪರ್ ಮಾರ್ಕೆಟ್‌ಗಳು ಹಾಗೂ ಮೆಕ್‌ಡೊನಾಲ್ಡ್ಸ್, ಪಿಜ್ಜಾ ಹಟ್, ಬರ್ಗರ್ ಕಿಂಗ್, ಟೇಕೋ ಬೆಲ್, ಡಂಕಿನ್ ಡೋನಟ್ಸ್, ಇಂತಹ 'ಫಾಸ್ಟ್ ಫುಡ್' ತಾಣಗಳು ಭಾರತೀಯರಿಗೆ ತೀವ್ರವಾದ ಕುತೂಹಲವನ್ನು, ಆಸಕ್ತಿಯನ್ನು, ಆಸೆಯನ್ನು ಉಂಟುಮಾಡುತ್ತಿದ್ದ ಕಾಲವೊಂದಿತ್ತು. ಆದರೆ ಇಂದು ಅವೆಲ್ಲವೂ, ಅದರಲ್ಲೂ ಮಾಲ್ ಸಂಸ್ಕೃತಿಯ ರುಚಿ ಬೆಂಗಳೂರೂ ಸೇರಿದಂತೆ ಭಾರತದ ದೊಡ್ಡ ನಗರ ಪ್ರದೇಶಗಳಲ್ಲಿ ವಾಸಿಸುವವರಿಗೆ ಚಿರಪರಿಚಿತ. ಹಾಗಾಗಿ, ಸೇಂಟ್ ಲೂಯಿಸ್ ಸೇರಿದಂತೆ ಅಮೆರಿಕವೇನೂ ಇಂದ್ರನಗರಿಯಂತೆ ನಮಗಿಂದು ಭಾಸವಾಗುವುದಿಲ್ಲ.

ಅಮೆರಿಕದಲ್ಲೇ ನೆಲೆಸಿರುವ ಬೆಂಗಳೂರಿನ ಬಸವೇಶ್ವರ ನಗರದ ಒಬ್ಬರು ನನಗೆ, 'ನೋಡಿ, ನಮ್ಮಲ್ಲಿ ಮತ್ತೆ ಬಂದು ಕೆಲವು ತಿಂಗಳು ಇದ್ದು ಇಲ್ಲಿನ ಜೀವನವನ್ನು ನೋಡಿ ಎಂದು ನನ್ನ ತಂದೆ ತಾಯಿಗಳಿಗೆ ಹೇಳಿದರೆ – ಅಲ್ಲಿನ ಮಾಲ್‌ಗಳನ್ನು ನಾವು ನೋಡುವುದೇನಿದೆ, ನಮ್ಮ ಬೆಂಗಳೂರಿನಲ್ಲೇ ಇದಕ್ಕಿಂತ ಚೆನ್ನಾದ ಮಾಲ್‌ಗಳಿವೆ ಎಂದರು' ಎಂದು ಹೇಳಿದ್ದನ್ನು ತಿಳಿಸಿದರು.

ವಿಮಾನ, ದೊಡ್ಡ ವಾಹನಗಳು, ಸಾಫ್ಟ್‌ವೇರ್, ಹೀಗೆ ಅನೇಕ ಕೈಗಾರಿಕೆಗಳನ್ನು ಹೊಂದಿ ಆರ್ಥಿಕ ದೃಷ್ಟಿಯಿಂದ ಅಮೆರಿಕದ ಒಂದು ಪ್ರಮುಖ ಆಸ್ತಿ ಹಾಗೂ ಸಾರಿಗೆಯ ಕೇಂದ್ರವಾದ ಸೇಂಟ್ ಲೂಯಿಸ್, ವಿಶಾಲವಾದ ರಸ್ತೆಗಳನ್ನು ಹೊಂದಿದೆ. ಆ ಸುಂದರ ನಗರದ ಸಮೀಪದ 'ಓ ಫ್ಯಾಲನ್' ನಗರದಲ್ಲಿ (ಇದನ್ನು ಸೇಂಟ್ ಲೂಯಿಸ್‌ನ ಹೊರವಲಯ ಎನ್ನುವುದು ಸಮಂಜಸ) ಒಂದು ತಿಂಗಳು ವಾಸಿಸಿ, ಶರತ್ ಕಾಲದಲ್ಲಿ ಅಲ್ಲಿನ ಪ್ರಕೃತಿ ಸೌಂದರ್ಯದ ಸೊಬಗನ್ನು ಸಮಗ್ರವಾಗಿ ಸವಿದು, ಪುನೀತ್ ರಾಜ್ ಕುಮಾರ್ ಅಭಿನಯದ 'ಗಂಧದಗುಡಿ'ಯನ್ನು ರಾಜ್ಯೋತ್ಸವದ ದಿನ ಸಮೀಪದ ಚಿತ್ರಮಂದಿರದಲ್ಲಿ ವೀಕ್ಷಿಸಿ ಸಂಭ್ರಮಿಸಿದ ನನಗೆ, ಕೊನೆಗೊಂದು ದಿನ ಸೇಂಟ್ ಲೂಯಿಸ್‌ನ ಲ್ಯಾಂಬರ್ಟ್ ವಿಮಾನ ನಿಲ್ದಾಣದಿಂದ ಮೇಲೇರಿದಾಗ ಏನೋ ಕಳೆದುಕೊಂಡನೆಂದು ಅನ್ನಿಸಿದ್ದಂತೂ ಸತ್ಯ.

ಪ್ರತಿಕ್ರಿಯಿಸಿ: feedback@sudha.co.in